# ಬದಲಾವಣೆಯ ಸುತ್ತ ಮುತ್ತ..

ಯಾವುದೋ ಒಂದು ಊರು– ಐವತ್ತು ವರ್ಷಗಳ ಹಿಂದೆ ಹೇಗಿತ್ತೋ ಈಗಲೂ ಹಾಗೆಯೇ ಇದೆ ಎಂದು ಕಲ್ಪಿಸಿಕೊಳ್ಳೋಣ. ಅವೇ ಮಣ್ಣಿನ ರಸ್ತೆಗಳು; ಎತ್ತಿನ ಬಂಡಿಗಳು; ಸೀಮೇಎಣ್ಣೆ ಬುಡ್ಡಿಯ ದೀಪದ ಹೊರತು ಬೆಳಕಿಗಾಗಿ ಬೇರೆ ಸಾಧನವಿಲ್ಲ. ಅಲ್ಲಿನ ಜನ, ಟಿ.ವಿ, ಫೋನು, ಮೊಬೈಲ್, ಕಂಪ್ಯೂಟರ್– ಇತ್ಯಾದಿಗಳ ಹೆಸರುಗಳನ್ನೇ ಕೇಳಿಲ್ಲ. ಅವರ ನಡೆ ನುಡಿ ಯೋಚನೆಗಳಲ್ಲಿ, ಜೀವನ ಶೈಲಿಯಲ್ಲಿ ಏನೇನೂ ವ್ಯತ್ಯಾಸವಾಗಿಲ್ಲ... ಈಗಲೂ ಇಂಥದೊಂದು ಊರಿದ್ದರೆ, ಆ ಊರಿನ ಜನ ಪರಂಪರೆಯನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದಾರೆ ಎಂದರ್ಥವಲ್ಲ. ಬದಲಾಗಿ, ಅವರು ಹೊರ ಜಗತ್ತಿನಲ್ಲಿ ಸಂಭವಿಸುತ್ತಿರುವ ಬದಲಾವಣೆಗಳಿಗೆ ತಮ್ಮನ್ನು ತಾವು ತೆರೆದುಕೊಳ್ಳದೆ, 'ಓಬೀರಾಯ'ರಾಗಿಯೇ ಉಳಿದಿದ್ದಾರೆ ಎಂದರ್ಥ. ಹೀಗೆ ಕತ್ತಲ ಕೋಣೆಯಲ್ಲಿ ಮನಸ್ಸಿಗೂ ಬೀಗ ಜಡಿದು ಬೆಳಕಿಗೆ ಬೆನ್ನು ಹಾಕಿ ಕುಳಿತವರು ಬದುಕಿನ ಚಲನಶೀಲತೆಯನ್ನು ಕಳೆದುಕೊಂಡು ಜಡರಾಗುತ್ತಾರೆ. ಬದಲಾವಣೆಗಳಿಗೆ ಸ್ಪಂದಿಸುವುದು ಬೆಳವಣಿಗೆಗೆ ಇರುವ ಬಹುಮುಖ್ಯ ಸಾಧನ ಎಂಬ ಅರಿವು ಇಲ್ಲದವರು ನಿಂತು ಹೋದ ಗಡಿಯಾರದ ಮುಳ್ಳುಗಳಂತೆ ಯಾವುದೋ ಒಂದು ಕಾಲಘಟ್ಟಕ್ಕೇ ಅಂಟಿಕೊಂಡು ಸ್ಥಗಿತಗೊಳ್ಳುತ್ತಾರೆ.

ಹಾಗೆ ನೋಡಿದರೆ ಬದಲಾವಣೆಯೆಂಬುದು ನಿಸರ್ಗ ಸಹಜವಾದ ಒಂದು ಪ್ರಕ್ರಿಯೆ. ಈ ಭೂಮಿಯಲ್ಲಿ ಮಾತ್ರವಲ್ಲ, ಇಡಿಯ ವಿಶ್ವದಲ್ಲೇ ನಿರಂತರವಾಗಿ ಒಂದಲ್ಲಾ ಒಂದು ಬದಲಾವಣೆ ನಡೆಯುತ್ತಲೇ ಇರುತ್ತದೆ. ಪರಿವರ್ತನ ಶೀಲತೆಯೇ ಸೃಷ್ಟಿಯ ಹಿಂದಿರುವ ಮೂಲ ಪ್ರೇರಣೆ. ಒಂದು ಆಲದ ಬೀಜ ತನ್ನ 'ಬೀಜ ಸ್ಥಿತಿ'ಯನ್ನು ತ್ಯಜಿಸಿ, ಬೇರೆ ಬೇರೆ ಅವಸ್ಥೆಗಳನ್ನು ದಾಟುತ್ತಾ, ಕೊನೆಗೆ ಒಂದು ಮಹಾವೃಕ್ಷವಾಗಿ ರೂಪುಗೊಳ್ಳುತ್ತದೆ. ಅತ್ಯಂತ ಕುರೂಪಿಯಾಗಿರುವ ಕಂಬಳಿಹುಳು ಹಲವು ಹಂತಗಳ ಮಾರ್ಪಾಟುಗಳ ನಂತರ, ಆಕರ್ಷಕವಾಗಿರುವ ಚಿಟ್ಟೆಯಾಗಿ ಪರಿವರ್ತಿತವಾಗುತ್ತದೆ. ಸಮುದ್ರದ ಉಪ್ಪುನೀರು ಸೂರ್ಯನ ಶಾಖದಿಂದ ಕಾದು, ಆವಿಯಾಗಿ ಆಕಾಶಕ್ಕೇರಿ, ಮೋಡವಾಗಿ ಘನಿಸಿ, ಮಳೆಯ ರೂಪದಲ್ಲಿ ಸಿಹಿ ನೀರಾಗಿ ಭೂಮಿಗೆ ಹಿಂತಿರುಗುತ್ತದೆ. ಇಂಥ ಬದಲಾವಣೆಗಳು ನಡೆಯದಿದ್ದಲ್ಲಿ ಸೃಷ್ಟಿ ಚಕ್ರದ ಚಲನೆಯೇ ಸ್ಥಗಿತವಾಗುತ್ತಿತ್ತಲ್ಲವೆ? ಮನುಷ್ಯನೂ ಸೇರಿದಂತೆ ಎಲ್ಲ ಜೀವಿಗಳಲ್ಲಿಯೂ– ದೈಹಿಕ ಹಾಗೂ ಮಾನಸಿಕ ವಲಯಗಳಲ್ಲಿ– ಹುಟ್ಟಿನಿಂದ ಸಾವಿನವರೆಗೆ ಹಲವು ಹಂತಗಳಲ್ಲಿ ಪರಿವರ್ತನೆ ನಡೆಯುತ್ತಲೇ ಇರುತ್ತದೆ. ನಮ್ಮ ದೇಹದಲ್ಲಿನ ಪ್ರತಿಯೊಂದು ಜೀವಕೋಶವೂ ಪ್ರತಿ ಏಳು ವರ್ಷಗಳಿಗೊಮ್ಮೆ ನಾಶವಾಗಿ, ಅದರ ಸ್ಥಾನದಲ್ಲಿ ಹೊಸ ಜೀವಕೋಶ ಕಾಣಿಸಿಕೊಳ್ಳುತ್ತದೆ ಎನ್ನುತ್ತಾರೆ ಜೀವ ವಿಜ್ಞಾನಿಗಳು.

ಮನುಷ್ಯ ಆದಿಮ ಸ್ಥಿತಿಯಿಂದ ನಾಗರಿಕ ಹಂತ ತಲುಪಲು ಆತನ ಆಲೋಚನೆಗಳಲ್ಲಿ ಹಾಗೂ ಕ್ರಿಯೆಗಳಲ್ಲಿ ಉಂಟಾದ ಬದಲಾವಣೆಗಳೇ ಕಾರಣ. ಬೇಟೆಯಿಂದ ಬೇಸಾಯದ ಕಡೆಗೆ ಹೊರಳಿಕೊಂಡ ಮನುಷ್ಯನಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿನ ಕೈಗಾರಿಕಾ ಕ್ರಾಂತಿ ಬದಲಾವಣೆಯ ಬಿರುಗಾಳಿಯನ್ನೇ ಹುಟ್ಟುಹಾಕಿತು ಎನ್ನಬಹುದು. ಈಗಂತೂ ವೈಜ್ಞಾನಿಕ ಆವಿಷ್ಕಾರಗಳೂ, ಅವುಗಳನ್ನು ಆಧರಿಸಿ ಬೆಳೆಯುತ್ತಿರುವ ತಂತ್ರಜ್ಞಾನವೂ ಒಟ್ಟು ಸೇರಿ ಆಧುನಿಕ ಮಾನವನ ಜೀವನಶೈಲಿ ಹಾಗೂ ಆಲೋಚನೆಯ ಧಾಟಿ– ಎರಡನ್ನೂ ತ್ವರಿತವಾಗಿ ಬದಲಾಯಿಸುತ್ತಿವೆ. ವಿದ್ಯುನ್ಮಾನ ಮಾಧ್ಯಮಗಳಿಂದಾಗಿ, ಇಡಿಯ ಪ್ರಪಂಚ ಮನುಷ್ಯನ ಅಂಗೈಯಲ್ಲೇ ಇರುವಂತಾಗಿದೆ. ಬದಲಾವಣೆಗಳು ಸೃಷ್ಟಿಸಿರುವ ಹೊಸ ಪರಿಸರಕ್ಕೆ ಹೊಂದಿಕೊಳ್ಳಲಾರದ ಮನುಷ್ಯ ರಿಪ್‌ವ್ಯಾನ್ ವಿಂಕಲ್‌ನಂತೆ 'ಕಾಲಹತ' (Out dated) ನಾಗುತ್ತಾನೆ.

ಬದಲಾವಣೆಗಳು ಎಷ್ಟೇ ಅನಿವಾರ್ಯವಾದರೂ, ಅವುಗಳನ್ನು ಕುರಿತಾದ ಒಂದು ಪ್ರತಿರೋಧ ಪ್ರವೃತ್ತಿ ಮನುಷ್ಯನಲ್ಲಿ ಮಿಸುಕಾಡುತ್ತಲೇ ಇರುತ್ತದೆ. ಬದಲಾವಣೆಗಳನ್ನು ಕುರಿತಾದ ಭಯ, ಸವೆದು ಹೋಗಿರುವ ರೂಢಿಗತ ಮಾರ್ಗದಲ್ಲೇ ನಡೆಯುವುದು ಕ್ಷೇಮ ಎಂಬ ನಂಬಿಕೆ– ಇತ್ಯಾದಿಗಳು ಮನುಷ್ಯ ಬದಲಾವಣೆಗಳನ್ನು ಸುಲಭವಾಗಿ ಸ್ವೀಕರಿಸದಿರುವಂತೆ ತಡೆಯೊಡ್ಡುತ್ತವೆ. ಆದರೆ ಕ್ರಮೇಣ ಮನುಷ್ಯ ಬದಲಾವಣೆಗಳಿಗೆ ಹೊಂದಿಕೊಳ್ಳಲೇ ಬೇಕಾಗುತ್ತದೆ. ವಿವೇಕಿಯಾದವನು ಅನಪೇಕ್ಷಿತ ಹಾಗೂ ಅನಗತ್ಯ ಬದಲಾವಣೆಗಳನ್ನು ದೂರವಿರಿಸಿ, ಪರಂಪರೆಯ ಒಳ್ಳೆಯ ಅಂಶಗಳನ್ನು ಉಳಿಸಿಕೊಂಡು, ಹೊಸತನ್ನು ಸ್ವೀಕರಿಸುತ್ತಾನೆ. ಬದಲಾವಣೆಯೇ ಪ್ರಗತಿಯ ಹಿಂದಿರುವ ಪ್ರೇರಣೆ. ಆದ್ದರಿಂದಲೇ ಟೆನಿಸನ್ ಕವಿ– 'Old order changeth yielding place to new and God fulfilling himself in many ways..' ಎಂದಿರುವುದು.

■ ವೈನತೇಯ

## ಮಾತೇ ಮುತ್ತು

★ ವ್ಯಕ್ತಿ ಎಷ್ಟು ಎತ್ತರಕ್ಕೆ ಏರಿದ್ದಾನೆ ಎಂಬುದು ಮುಖ್ಯವಲ್ಲ. ಬದಲಿಗೆ ಕೆಳಗೆ ಬಿದ್ದಾಗ ಆತ ಪುಟಿದು ಹೇಗೆ ಮೇಲೇಳುತ್ತಾನೆ ಎಂಬುದರಲ್ಲಿ ಅವನ ಯಶಸ್ಸು ಅಳೆಯಬೇಕು.

–ವಿನ್‌ಸ್ಟನ್ ಚರ್ಚಿಲ್

---

★ ಬಹಳಷ್ಟು ವಿಚಾರ ವಿನಿಮಯ ನಡೆಸಿದ ಮೇಲೆ ಶಾಸ್ತ್ರ ಶುದ್ಧವಾಗಿದೆ. ಅದನ್ನು ಬದಲಿಸಲು ಜೈಲಿನ ಸಲಾಕಿಗಳಿಂದ ಆಗುವುದಿಲ್ಲ.

–ಬಾಲ ಗಂಗಾಧರನಾಥ ತಿಲಕ್

---

★ ಬ್ರಾಹ್ಮಣನಾಗಲೀ, ಶ್ರೇಷ್ಠ ಕಲಾವಿದನಾಗಲೀ ಮನಬಂದಂತೆ ನಡೆಯುವವನಾದರೆ –ನಿತ್ಯವೂ ಸಮುದ್ರದಲ್ಲಿ ಮುಳುಗಿದರೂ ಸಾಕಷ್ಟು ಚಿತ್ತಶುದ್ಧಿ ಹೊಂದುವುದಿಲ್ಲ.

–ಸುಭಾಷಿತ

---

★ ದೇವರಿಲ್ಲವೆಂದು ವಾದಿಸುವುದು, ವೇದಗಳು ಪ್ರಮಾಣವಲ್ಲವೆನ್ನುವುದು, ದೇವತೆಗಳನ್ನು ಬೈಯುವುದು, ಹಗೆತನ, ಪೊಳ್ಳುಜಂಭ, ಅಭಿಮಾನ, ಸಿಟ್ಟು, ಕ್ರೂರತನ ಇವುಗಳನ್ನು ಬಿಡಬೇಕು.

–ಮನುಸ್ಮೃತಿ

---

★ ತನ್ನ ಉನ್ನತಿಯಲ್ಲಿ ಸಂತೃಪ್ತಿ ಹೊಂದುವುದು ಬೇಡ, ಎಲ್ಲರ ಉನ್ನತಿಯಲ್ಲಿ ತನ್ನ ಉನ್ನತಿಯನ್ನು ಕಾಣುವುದು ಒಳ್ಳೆಯದು.

–ದಯಾನಂದ ಸರಸ್ವತಿ

---

★ ಒಬ್ಬ ವ್ಯಕ್ತಿ ಒಂದು ಗಿಡ ನೆಟ್ಟರೆ ಅಥವಾ ಬೇಸಾಯ ಮಾಡಿದರೆ ಅದರ ಪೂರ್ಣ ಪ್ರತಿಫಲ ಆತನಿಗೆ ಸಿಗುತ್ತದೆ. ಜತೆಗೆ, ಆ ಗಿಡ ಅಥವಾ ಬೇಸಾಯದಿಂದ ಬರುವ ಹಣ್ಣು ಫಸಲನ್ನು ಯಾರಾದರೂ ಕದ್ದರೂ, ಪ್ರಾಣಿ ಪಕ್ಷಿಗಳು ತಿಂದರೂ, ಅದರಿಂದ ಗಾಳಿ ಬೀಸಿದರೂ –ಅವೆಲ್ಲವೂ ನೆಟ್ಟವನ ಪಾಲಿಗೆ ದಾನವಾಗಿ ಪರಿಗಣಿಸಲ್ಪಡುತ್ತದೆ.

–ಮಹಮದ್ ಪೈಗಂಬರ್

---

★ ಮೃಗಗಳಲ್ಲಿ ಸಿಂಹಕ್ಕೆ ಗಣ್ಯಸ್ಥಾನವುಂಟು. ಅದೇ ರೀತಿಯಲ್ಲಿ ಮನುಷ್ಯನಾದವನು ಗಣ್ಯನೆಂದೆನಿಸಿಕೊಳ್ಳಬೇಕಾದರೆ ಅವನೊಬ್ಬ ಶ್ರೇಷ್ಠ ಚಿಂತಕನಾಗಿರಬೇಕು.

–ಪೆರಿಯಾರ್

---

★ ಗಡ್ಡ ಬಿಟ್ಟಾಕ್ಷಣ ಅವನು ದಾರ್ಶನಿಕನಾಗಲಾರ.

–ಬರ್ನಾರ್ಡ್ ಶಾ

---

★ ನಗುವು ಸಾವನ್ನು ಮುಂದೂಡುತ್ತದೆ; ಆದುದರಿಂದ ಮನುಷ್ಯ ನಕ್ಕು ನಲಿಯುವುದನ್ನು ಕಲಿಯಬೇಕು.

–ಇಟಲಿ ಗಾದೆ

---

★ ಎಲ್ಲರ ಬಾಯಿಯಿಂದಲೂ ಅದೇ ಮಾತು ಬರುತ್ತಿದೆ ಎನ್ನುವುದು ಸುಳ್ಳಿನ ಮತ್ತೊಂದು ಮುಖ.

–ಅನಾಮಿಕ

---

★ ಹಣದ ಮೇಲೆ ನಂಬಿಕೆಯನ್ನಿಡಬೇಡಿ; ಆದರೆ ನಂಬಿಕೆಯ ಮೇಲೆ ಹಣವನ್ನಿಡಿ.

–ಓ.ಡಬ್ಲ್ಯು.ಹೋಮ್ಸ್

---

★ ಕೂಗಾಡುವುದು ಹೆಚ್ಚು ಮಂದಿಗೆ ಬರುತ್ತದೆ; ಆದರೆ, ಮಾತನಾಡುವ ಕಲೆ ಕೆಲವರಿಗೆ ಮಾತ್ರ ಬರುತ್ತದೆ.

–ಏಮೋಸ್